# ಇದು ಹಕ್ಕಿ ಅಲ್ಲ..
# ಆದ್ರೂ ಹಾರ್‍ತೈತಲ್ಲ.!

■ ಸುನೀಲ ಬಾರ್ಕೂರ ಕೈಗಾ
ಚಿತ್ರ: ಹರೀಶ ಕೂಳೂರು





ಈ ವರ್ಷದ ಆರಂಭದಲ್ಲಿ ವಾರ್ಷಿಕ ಪಕ್ಷಿಗಣತಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದೆ. ಕೈಗಾ ಸಮೀಪ ಕುಚ್ಚೆಗಾರ ಎಂಬ ಪುಟ್ಟಗ್ರಾಮದ ಗುಡ್ಡವನ್ನು ಹತ್ತುತ್ತಿರುವಾಗ ಪತ್ನಿ ಶ್ರೇಯಾ ನನ್ನನ್ನು ಜೋರಾಗಿ ಎಳೆದು, ಪಕ್ಕದ ಗಿಡದತ್ತ ಏನನ್ನೋ ತೋರಿಸಿದಳು. ನೋಡಿದರೆ ಅಲ್ಲೊಂದು ಹಲ್ಲಿ. 'ಹಕ್ಕಿ ಗಣತಿ ಮಾಡು ಅಂದ್ರೆ ಬರೀ ಜಿರಲೆ, ಹಲ್ಲಿ ತೋರಿಸ್ತೀರಾ' ಎಂದು ಗೊಣಗಿದೆ. 'ಸ್ವಲ್ಪ ಸರಿಯಾಗಿ ನೋಡ್ರಿ, ಅದು ಮಾಮೂಲಿನಂತಿಲ್ಲ. ಅದಕ್ಕೆ ರೆಕ್ಕೆ ಇರುವಂತಿದೆ' ಅಂದ್ಲು.

ನಾನು ಇಂತಹ ಹಲ್ಲಿಯನ್ನೆಂದೂ ನೋಡಿರಲಿಲ್ಲ ಕೇಳಿರಲಿಲ್ಲ. ಅದಾಗಲೇ ನಮ್ಮ ತಂಡದವರು ನಮಗಿಂತ ಮುಂದೆ ಸಾಗಿದ್ದರು. ಅವರನ್ನು ಕರೆಯಲು ಹೊಡೆದ ಶಿಳ್ಳೆಗೆ ಇಡೀ ತಂಡ ನನ್ನತ್ತ ದುರುಗುಟ್ಟಿ ನೋಡಿತು. 'ಗುಡ್ ಬಾರ್ಕೂರ, ಬಲು ಅಪರೂಪದ ಹಾರುವ ಹಲ್ಲಿ. ವಿನಾಶದ ಅಂಚಿನಲ್ಲಿದೆ. ಬಹುಶಃ ಇದು ಇವತ್ತಿನ ಸರ್ಪ್ರೈಸ್' ಎಂದರು ನಮ್ಮ ತಂಡದ ನಾಯಕ ರಾಜೀವ್.

ಆಂಗ್ಲ ಭಾಷೆಯಲ್ಲಿ ಡ್ರಾಕೋ ಎನ್ನಲಾಗುವ ಹಾರುವ ಹಲ್ಲಿಯು ಸುಮಾರು 20 ಸೆಂ.ಮಿ. ಉದ್ದವಿರುತ್ತದೆ. ಸಾಮಾನ್ಯವಾಗಿ ಮರದ ಮೇಲೆ ಜೀವಿಸುವ ಇದು ಭೂಮಿಯ ಮೇಲೆ ಇಳಿಯುವುದು ಕೇವಲ ಮೊಟ್ಟೆ ಇಡುವಾಗ ಮಾತ್ರ. ಹೆಣ್ಣು ಹಲ್ಲಿಯು ತನ್ನ ತಲೆಯಿಂದ ಭೂಮಿಯಲ್ಲಿ ರಂಧ್ರ ಕೊರೆದು 2 ರಿಂದ 5 ಮೊಟ್ಟೆಗಳನ್ನಿಟ್ಟು ಮಣ್ಣು ಮುಚ್ಚಿ ಹೆಚ್ಚೆಂದರೆ ಒಂದು ದಿನ ಅದನ್ನು ಕಾಯುತ್ತದೆ. ಅಲ್ಲಿಗೆ ತಾಯಿ ಮಗುವಿನ ಬಾಂಧವ್ಯ ಕೊನೆಗೊಳ್ಳುತ್ತದೆ.

ಸುಮಾರು 30 ಅಡಿಗಳಷ್ಟು ದೂರ ಹಾರುವ ಸಾಮರ್ಥ್ಯವಿರುವ ಇವು ತಾವಿರುವ ಮರದಲ್ಲಿ ಬೇರೆ ಹಲ್ಲಿಗಳು ಬಂದರೆ ಓಡಿಸುತ್ತವೆ. ವಿಶ್ವದ ಕೆಲಭಾಗಗಳಲ್ಲಿ ಇವುಗಳು ವಿಷಕಾರಿ ಎಂಬ ನಂಬಿಕೆ ಇನ್ನೂ ಇರುವುದರಿಂದ ಬೇಟೆಗಾರರಿಂದ ಬದುಕುಳಿದಿವೆ.